

### ಹುಟ್ಟಿಗೇನು ಅರ್ಥ?

ನಾನು ನನ್ನ 19 ವರ್ಷದ ಮಗಳಿಗೂ 'ಆ್ಯಂಟಿ ನೈಟಲಿಸ್ಟ್' ಅಭಿಯಾನದ ಕುರಿತು ತಿಳಿಸಿದ್ದೇನೆ. ಆಕೆಯೂ ಮಗುಮುಕ್ತ ಜೀವನಶೈಲಿಯಲ್ಲಿ ಆಸಕ್ತಿ ಹೊಂದಿದ್ದು ನಮ್ಮ ಗುಂಪಿನ ಸದಸ್ಯಳಾಗಿದ್ದಾಳೆ. ಮಾನವ ಜನ್ಮ ನಿರರ್ಥಕವಾದದ್ದು. ಹುಟ್ಟಿದ ಮೇಲೆ ಸಾಯಲೇಬೇಕು ಎಂಬುದಾದರೆ ಹುಟ್ಟಿಗಿರುವ ಅರ್ಥವಾದರೂ ಏನು? ಸಾಮಾಜಿಕ ಭದ್ರತೆಯಿಲ್ಲದ ಸಮಾಜದಲ್ಲಿ ಮಕ್ಕಳನ್ನು ಹುಟ್ಟಿಸುವುದಾದರು ಏಕೆ?

**-ಅನುಗ್ರಹ ಕುಮಾರ್ ಶರ್ಮಾ,** ಗ್ರಾಫಿಕ್ ಡಿಸೈನರ್

### ಸಾಮಾಜಿಕ ಅಸಮತೋಲನ?

ಬಂಜೆತನ ಒಂದೆಡೆಯಾದರೆ, ಇನ್ನೊಂದೆಡೆ ಎಲ್.ಜಿ.ಬಿ.ಟಿ. ಸಮುದಾಯದವರ ಮದುವೆಗಳಲ್ಲಿ ಮಕ್ಕಳಾಗುವುದಿಲ್ಲ. ಇದರ ಜೊತೆಗೆ ಮದುವೆಯಾಗಲು ಬಯಸದವರ ಸಂಖ್ಯೆ ಕೂಡ ಏರಿಕೆಯಾಗುತ್ತಿದೆ. ಹೀಗಿದ್ದ ಪಕ್ಷದಲ್ಲಿ ಸಾಮಾಜಿಕ ಅಸಮತೋಲನ ಆಗುವುದಿಲ್ಲವೆ ಎಂಬ ಪ್ರಶ್ನೆ ಮೂಡುತ್ತದೆ. ಸಲಿಂಗ ಪ್ರೇಮಿಗಳು ಮದುವೆಯಾಗಿ ಮಕ್ಕಳು ಬೇಕೆಂದು ಬಯಸಿದರೆ ದತ್ತು ಪಡೆಯಬಹುದಾದ, ಬಾಡಿಗೆ ತಾಯಿಯಿಂದ ಮಗು ಪಡೆಯಬಹುದಾದಂತಹ ಅವಕಾಶಗಳು ಇವೆ. ಆದರೆ, ಹೆಣ್ಣು ಹೆತ್ತರೆ ತಾನೆ ಇವರಿಗೆಲ್ಲ ಮಕ್ಕಳು ಸಿಗುವುದು? ಹೆಣ್ಣು ತಾನು ಹೆರುವುದೇ ಇಲ್ಲ ಎಂದು ನಿರ್ಧರಿಸಿದರೆ?



'ಬಂಜೆತನವಾಗಲಿ, ಮಗು ಹೆರದಿರಲು ನಿರ್ಧರಿಸುವುದಾಗಲಿ ಹೇಳಿಕೊಳ್ಳುವಂಥ ದೊಡ್ಡ ಸಮಸ್ಯೆಯೇ ಅಲ್ಲ' ಎನ್ನುತ್ತಾರೆ ವೈದ್ಯೆ–ಸಾಹಿತಿ ಡಾ. ಎಚ್.ಎಸ್. ಅನುಪಮಾ.

''ಬಂಜೆತನ ಚಿಕಿತ್ಸೆಗೆ ಹೋಗುವ ಅರ್ಧದಷ್ಟು ಜನರಿಗೆ ಸಮಸ್ಯೆಯೇ ಇರುವುದಿಲ್ಲ. ಎಲ್ಲದಕ್ಕೂ ಕಾರ್ಯಕಾರಣ ಸಂಬಂಧ ಇರಬೇಕು ಎಂಬುದಿಲ್ಲ. ಮೆಡಿಕಲ್ ಕಾರ್ಪೊರೆಟಿಸಂ ಮತ್ತು ಹೆಣ್ಣುಮಕ್ಕಳಿಗೆ ತಾಯ್ತನ ಎಂಬ ಹುದ್ದೆ ಕೊಟ್ಟಿರುವ ಸಾಂಸ್ಕೃತಿಕ ರಾಜಕಾರಣದ ಒತ್ತಡ ಇಂದು ಬಂಜೆತನವನ್ನು ದೊಡ್ಡ ಕಗ್ಗಂಟಾಗಿಸಿದೆ.

ತಾಯ್ತನ ಎಂಬುದು 'ಕಲ್ಚರಲಿ ಕನ್‌ಸ್ಟ್ರಕ್ಟೆಡ್'; ಟೆಕ್ನಾಲಾಜಿಕಲಿ ಮಾಡಿಫೈಯ್ಡ್'. ಬಂಜೆತನದ ಸಂಶೋಧನೆಗೆ ಮಾಡುವ ಖರ್ಚನ್ನು ಮಕ್ಕಳು ಹುಟ್ಟಿದ ಮೇಲೆ ಆಗುವ ಶಿಶು ಮರಣದ ಕುರಿತಾದ ಸಂಶೋಧನೆಗೆ ವ್ಯಯಿಸಿದ್ದರೆ ಮಗುವಿನ ಬಗ್ಗೆ ಕಾಳಜಿ ಇದೆ ಎಂದು ಒಪ್ಪಬಹುದು. ಮಗು ಕಳೆದುಕೊಂಡ ತಾಯಿಯೂ ಇಲ್ಲಿ ಬಂಜೆಯೇ. ಇದಕ್ಕೆ ಸಂಬಂಧಿಸಿದ್ದೇ ಆದ ದುಬಾರಿಯಿರುವ ಹೆಣ್ಣುಮಕ್ಕಳ ಸರ್ವೈಕಲ್ ಕಾನ್ಸರ್ ಬಗ್ಗೆ, ಹೆಣ್ಣುಮಕ್ಕಳ ಸುರಕ್ಷತಾ ಗರ್ಭನಿರೋಧಕ ಬಗ್ಗೆ ಯಾಕೆ ಸಂಶೋಧನೆಯಾಗುವುದಿಲ್ಲ?

ನಮ್ಮ ಸಮಾಜಕ್ಕೆ ಹೆಣ್ಣಿನ ಬಗ್ಗೆ ಕಾಳಜಿಯಿಲ್ಲದೆ, ಹೆಣ್ಣಿನ ತಾಯ್ತನ ಮುಖ್ಯವಾಗುತ್ತದೆ. ಬಂಜೆತನ ಮಾತ್ರ ಸಮಸ್ಯೆಯಾಗಿ ಕಾಣಿಸುತ್ತದೆ. ತಾಯ್ತನವೇ ಹೆಣ್ಣಿನ ಆತ್ಯಂತಿಕ ಕೆಲಸ, ಹೆಣ್ತನದ ಕೊನೆಯ ಭಾಗವೇ 'ಒಳ್ಳೆಯ ಅಮ್ಮ' ಆಗುವುದು ಎಂದು ಬಿಂಬಿಸಿದ್ದಾರೆ. ಈ ತಾಯ್ತನವನ್ನು ಪೂರೈಸಲು ಆಗದಾಗ ಬಂಜೆತನ ಕಾಯಿಲೆ ಎಂಬ ಮಟ್ಟಕ್ಕೆ ತಂದಿಟ್ಟಿದ್ದಾರೆ'' ಎಂದು ಅನುಪಮಾ ಅವರು ಬಂಜೆತನಕ್ಕಿರುವ ಸಾಮಾಜಿಕ ಮತ್ತು ಮೆಡಿಕಲ್ ಮಾಫಿಯಾದ ಎರಡೂ ಆಯಾಮಗಳತ್ತ ಗಮನ ಸೆಳೆಯುತ್ತಾರೆ.

''ಪ್ರಕೃತಿಯಲ್ಲಿ ಹೂ ಬಿಡದ ಬಳ್ಳಿ, ಕಾಯಿ ಬಿಡದ ಮರ, ಮರಿ ಹಾಕದ ಪ್ರಾಣಿಗಳಿವೆ, ಮೊಟ್ಟೆ ಇಡದ ಪಕ್ಷಿಗಳಿವೆ. ಅವು ಮಕ್ಕಳಿಲ್ಲ ಎಂದು ನರಳುವುದಿಲ್ಲ. ಆದರೆ ಹೆಣ್ಣಿಗೆ ಮಗು ಆಗಿಲ್ಲ ಎಂಬ ಸಂಗತಿಯನ್ನು ಮುಂದಿಟ್ಟುಕೊಂಡು ಸಮಾಜ ಅವಳು ನರಳುವಂತೆ ಮಾಡುತ್ತದೆ. ಮದುವೆಯ ಉದ್ದೇಶ ಸಾಂಗತ್ಯ, ಆಮೇಲೆ ಮಕ್ಕಳನ್ನು ಹೆರುವುದು. ಹಾಗೆಂದ ಮಾತ್ರಕ್ಕೆ ಮಕ್ಕಳಾಗದಿದ್ದರೆ ಮದುವೆ ವಿಫಲ ಎಂದಲ್ಲ. ಬಂಜೆತನದ ಚಿಕಿತ್ಸೆ ಎನ್ನುವುದೇ ಉದ್ಯಮ ಈಗ. ಬಂಜೆತನದ ಉದ್ಯಮೀಕರಣವಾಗಿದೆ. ಇದೇ ಉದ್ಯಮ ಹೆಣ್ಣುಮಕ್ಕಳ ಕೀಳರಿಮೆಗೆ ಕಾರಣವಾಗಿದೆ. ಭೂಮಿಯಲ್ಲಿರುವ ಶೇ. 100 ಹೆಣ್ಣುಮಕ್ಕಳು ಹೆರುತ್ತಲೇ ಇರಬೇಕೆಂದೇನೂ ಇಲ್ಲ. ಕೆಲವು ಹೆಣ್ಣುಮಕ್ಕಳು ಹೆರದಿದ್ದರೆ ಏನೂ ಆಗುವುದಿಲ್ಲ'' ಎನ್ನುವುದು ಅನುಪಮಾ ಅವರ ಅಭಿಪ್ರಾಯ.

ಪಾಶ್ಚಾತ್ಯ ದೇಶದಲ್ಲಿ ತೀವ್ರವಾದ ಸ್ತ್ರೀವಾದಿ ಚಳವಳಿಗಳು ಆರಂಭವಾದಾಗ, 'ಗಂಡುಮಕ್ಕಳು ತಮ್ಮ ಜೈವಿಕ ಕಾರಣದಿಂದಾಗಿಯೇ ಇಂದು ತಮ್ಮನ್ನು ಕಡೆಗಣಿಸಿ ಅಡಿಯಾಳನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕೆ ಮುಖ್ಯವಾಗಿ ಮಕ್ಕಳನ್ನು ಹೆರುವುದು ಕಾರಣವಾಗಿದೆ. ಮಕ್ಕಳನ್ನು ಹೆರುವುದು ಹೊರುವುದರಲ್ಲಿ ನಮ್ಮಿಡೀ ಜೀವನವನ್ನು ಮುಡಿಪಿಡಬೇಕು. ತಮ್ಮ ಅಸ್ತಿತ್ವವೇ ಇದರಲ್ಲಿ ಕಳೆದು ಹೋಗುತ್ತದೆ' ಎಂದು ಭಾವಿಸಿ ಸ್ತ್ರೀವಾದಿಗಳು ಮಕ್ಕಳನ್ನು ಹೆರುವುದಿಲ್ಲ ಎಂದು ನಿರ್ಧರಿಸಿದ್ದರು. ಇದು ಒಂದು ರೀತಿಯಲ್ಲಿ ನಮ್ಮ ವಚನಕಾರ್ತಿ ಅಕ್ಕಮಹಾದೇವಿ, 'ನೀನುಟ್ಟ ಬಟ್ಟೆ, ನೀ ಧರಿಸಿದ ಆಭರಣ, ನೀ ತಿನ್ನುತ್ತಿರುವ ಅನ್ನ ನನ್ನದು' ಎಂದು ಕೌಶಿಕ ರಾಜ ಹೇಳಿದಾಗ, ಎಲ್ಲವನ್ನೂ ಧಿಕ್ಕರಿಸಿ ಬಟ್ಟೆ ಕಿತ್ತೆಸೆದು, ತನ್ನ ತಲೆಗೂದಲಿನಿಂದಲೇ ಮೈಮುಚ್ಚಿಕೊಂಡಿದ್ದಳಲ್ಲ, ಅದೇ ಮಾದರಿಯ ಹೋರಾಟ.

### ಆ್ಯಂಟಿ ನೈಟಲಿಸ್ಟ್ ಅಭಿಯಾನ

ಈಗ ಮಗುಮುಕ್ತ ಜೀವನಶೈಲಿಯನ್ನು ಹಲವರು ಆಯ್ದುಕೊಂಡಿದ್ದಾರೆ. ಮಗುವಿನ ಜವಾಬ್ದಾರಿ ಒಂದು ಹೊರೆ ಎಂದು ಭಾವಿಸುವವರು, ದುಬಾರಿಯಾದ ಜೀವನಶೈಲಿ ಇರುವಾಗ ಆರ್ಥಿಕ ಸುರಕ್ಷತೆ ಇಲ್ಲದ ಕಾರಣಕ್ಕಾಗಿ ಮಗು ಬೇಡ ಎನ್ನುವವರು, ಸುತ್ತಮುತ್ತಲಿನವರು ತಮ್ಮ ತಂದೆ ತಾಯಿಗಳನ್ನು ಸರಿಯಾಗಿ ನೋಡಿಕೊಳ್ಳದೆ ಇದ್ದಾಗ ಆ ಘಟನೆಗಳಿಂದ ಪ್ರಭಾವಿತರಾಗಿ ತಮ್ಮ ಮಕ್ಕಳು